ಮಾಡಲಾಯಿತು. ಅದರಲ್ಲಿ ಕಂಡುಬಂದ ಒಂದು ಪ್ರಮುಖ ವ್ಯತ್ಯಾಸವೆಂದರೆ. 2 ರಿಂದ 3 ವರ್ಷ ವಯಸ್ಸಿನಲ್ಲಿ ಹುಡುಗರ ನಡವಳಿಕೆಯ ಸಮಸ್ಯೆಗಳಲ್ಲಿ ಮೇಲುಗೈ. ಆಟದ ಕಾರುಗಳನ್ನು, ವಸ್ತುಗಳನ್ನು ಮುರಿದು, ರಿಪೇರಿ ಮಾಡಿ ಆನಂದ ಪಡುವುದು; ಹೊಡೆಯುವ –ಗುದ್ದುವ –ಪಲ್ಟಿ ಹೊಡೆಯುವ ಆಟಗಳು ಇವು ಅವರ ಸಾಮಾನ್ಯ ಪ್ರವೃತ್ತಿ. ಇವೆಲ್ಲವೂ 'ಹೊರಹಾಕುವ' (externalizing) ನಡವಳಿಕೆಗಳು.

ಹುಡುಗಿಯರಲ್ಲಿ ಇರುವ, ಇತರರ ಬಗೆಗಿನ ಕಾಳಜಿ ಗಂಡುಮಕ್ಕಳಲ್ಲಿ ಕಂಡುಬರುವುದು ಬಲು ಕಡಿಮೆ. ಅತಿಚಟುವಟಿಕೆ (hyperactivity), ಸಹಪಾಠಿಗಳೊಡನೆ ಜಗಳ ಇವು ಗಂಡು ಮಕ್ಕಳಲ್ಲಿ 5– 6 ವರ್ಷದವರೆಗೂ ಮುಂದುವರಿಯುತ್ತದೆ. ಹಾಗಾಗಿ ಇವು 'ಸಮಸ್ಯೆ' ಎನ್ನುವುದಕ್ಕಿಂತ ಸಹಜ ಎನಿಸುತ್ತವೆ. ಆದರೆ ಈ ವಯಸ್ಸಿನ ನಂತರ ಅತಿಚಟುವಟಿಕೆ ಕಡಿಮೆಯಾಗುತ್ತದೆ. ಆ ಬಳಿಕವೂ ಅತಿಚಟುವಟಿಕೆ ಮುಂದುವರಿದರೆ 'ಇವನು ಹುಡುಗ, ತುಂಟತನ ಇದ್ದೇ ಇರುತ್ತದೆ' ಎಂದು ಸುಮ್ಮನಾಗುವಂತಿಲ್ಲ. ನೀವು ವೈದ್ಯರನ್ನು ನೋಡಲೇಬೇಕು.

ಹುಡುಗರನ್ನು ಶಿಸ್ತಿಗೆ ಒಳಪಡಿಸುವ ಬಗೆಗೆ ಅಪ್ಪ– ಅಮ್ಮಂದಿರಲ್ಲಿ ಬಹುವಾಗಿ ಪ್ರಚಲಿತವಿರುವ ನಂಬಿಕೆ ಏನೆಂದರೆ, 'ಹುಡುಗರನ್ನು ಹುಡುಗಿಯರ ಹಾಗೆ ಶಿಸ್ತಿನಿಂದ ಬೆಳೆಸುವುದು ವ್ಯರ್ಥ ಪ್ರಯತ್ನ' ಎಂಬುದು. ಇದರ ಹಿಂದೆ 'ಅವನು ಹುಡುಗ, ಹೇಗಿದ್ದರೂ ನಡೆಯುತ್ತದೆ' ಎಂಬ ಧೋರಣೆಯೂ ಒಂದು ಕಾರಣ ಎನ್ನುವುದನ್ನು ನಾವು ಗಮನಿಸಬೇಕು. ಏಕೆಂದರೆ ಈ ಧೋರಣೆಯಿಂದ ತಮ್ಮ ಗಂಡು ಮಕ್ಕಳನ್ನು ಶಿಸ್ತಿಗೆ ಒಳಪಡಿಸುವ ಅವರ ಪ್ರಯತ್ನವೂ ಅರೆಮನಸ್ಸಿನಿಂದಲೇ ಕೂಡಿರುತ್ತದೆ. ಸಹಜವಾಗಿ ಇಂಥ half –hearted ಪ್ರಯತ್ನಗಳು ಮಕ್ಕಳು ಮಾತು ಕೇಳದಿರುವಂತೆ ಪ್ರಚೋದಿಸುತ್ತವೆ.

ಹಾಗಿದ್ದರೆ ನಾವು ಮೊದಲು ನೋಡಿದ ಜೈವಿಕ ವ್ಯತ್ಯಾಸಗಳನ್ನು ಬದಿಗಿಟ್ಟು ಹುಡುಗರನ್ನು ಹುಡುಗಿಯರಂತೆಯೇ ಶಿಸ್ತಿನಿಂದ ಬೆಳೆಸುವುದು ಸಾಧ್ಯವೆ? ಹುಡುಗರೂ ಮಕ್ಕಳೇ, ಮನುಷ್ಯರೇ ತಾನೆ? ಹಾಗಿದ್ದ ಮೇಲೆ ಶಿಸ್ತು ಅವರಿಗೂ ಅವಶ್ಯಕವೇ. ಶಿಸ್ತಿನ ಜಿವನವನ್ನು ಯಾವುದೇ ಮಕ್ಕಳಿಗೆ ಕಲಿಸುವುದು ಅವರ ಜೀವನಕ್ಕೆ ಅಮೂಲ್ಯ ಸಾಧನವೊಂದನ್ನು ಕೊಡುಗೆಯಿತ್ತಂತೆ ಎಂಬುದನ್ನು ಅಪ್ಪ– ಅಮ್ಮ ಗಮನಿಸಬೇಕು. ಜೈವಿಕ ವ್ಯತ್ಯಾಸಗಳು ಅನ್ವಯಿಸುವುದು ಶಿಸ್ತು ಕಲಿಸುವ ವಿಧಾನಗಳಿಗೆ ಹೊರತು, ಶಿಸ್ತು ಬೇಕೆ– ಬೇಡವೆ ಎಂಬುದಕ್ಕಲ್ಲ!

ಮಕ್ಕಳು ಸರಿಯಾಗಿ ಮಾಡುವುದಿಲ್ಲ ಎಂಬ ಕಾರಣಕ್ಕೆ ನಾವೇ ಮನೆಯ ಕೆಲಸಗಳನ್ನು ಮಾಡಿಬಿಡುವುದು, ಕೆಲಸ ಮಾಡಲು ಕಲಿಯುವ ಅವಕಾಶವನ್ನೇ ನೀಡದಿರುವುದು– ಗಂಡುಮಕ್ಕಳ ವಿಷಯದಲ್ಲಿ ಹೆಚ್ಚಿನ ಅಮ್ಮಂದಿರು ಅನುಸರಿಸುವ ರೀತಿ. ಹೆಣ್ಣು ಮಕ್ಕಳಲ್ಲೂ ಇಂದಿನ ದಿನಗಳಲ್ಲಿ ಈ ಸಮಸ್ಯೆ ಇಲ್ಲವೆಂದಲ್ಲ. ಆದರೂ 'ಮುಂದೆ ಮದುವೆಯಾದ ಮೇಲೆ ಬೇಕು' ಎಂಬ ಕಾರಣಕ್ಕಾದರೂ ಹೆಣ್ಣು ಮಕ್ಕಳಿಗೆ ಸ್ವಲ್ಪವಾದರೂ ಅಡಿಗೆ–ಮನೆ ಕೆಲಸಗಳ ಸ್ವಾವಲಂಬನೆ ಕಲಿಯುವ ಅವಕಾಶ ಸಿಕ್ಕಿಬಿಡುತ್ತದೆ. ಆದರೆ ಇಂದಿನ ದಿನಗಳಲ್ಲಿ ಗಂಡು ಮತ್ತು ಹೆಣ್ಣುಮಕ್ಕಳು ಮಾಡಬಹುದಾದ ಪ್ರತ್ಯೇಕ ಕೆಲಸಗಳ ನಡುವಣ ಗಡಿರೇಖೆ ಮರೆಯಾಗುತ್ತಿದೆ. ವಾಹನ ಚಾಲನೆ,– ಉದ್ಯೋಗ, – ಹೊರಗಿನ ಕೆಲಸಗಳನ್ನು ಹುಡುಗಿಯರು ಕಲಿಯುವಂತೆ, ಗಂಡುಮಕ್ಕಳೂ ಮನೆಯ ಒಳಗಿನ ಕೆಲಸಗಳನ್ನು ಕಲಿಯುವುದು ಅವಶ್ಯಕ. ಹೀಗೆ ಗೃಹಕೃತ್ಯಗಳ ಕಲಿಕೆ ಇಬ್ಬರಿಗೂ ಸ್ವಾವಲಂಬನೆಯನ್ನು ಕಲಿಸುತ್ತದೆ ಎಂಬುದನ್ನು ಅಪ್ಪ–ಅಮ್ಮ ಗಮನಿಸಲೇಬೇಕು.

## ಹುಡುಗೀ ಥರಾ ಅಳ್ತೀಯಾ!

ಹುಡುಗರಿಗೂ ಸಹಜ ಭಾವನೆಗಳು ಇರುತ್ತವೆ ಎಂಬುದನ್ನು ನಾವು ಗಮನಿಸಬೇಕು. ಹುಡುಗರಲ್ಲಿ ನೋವು – ಭಯ – ಮೊದಲಾದ ಭಾವನೆಗಳನ್ನು ವ್ಯಕ್ತಪಡಿಸುವುದನ್ನು ನಾವು ಒಪ್ಪಿಕೊಳ್ಳುವುದಿಲ್ಲ. ಅವುಗಳನ್ನು ತನ್ನೊಳಗೇ ಅಡಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸುತ್ತೇವೆ. ಮಹಿಳೆಯರ ಮುಂದೆ, ಹುಡುಗಿಯರ ಮುಂದೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದನ್ನು 'ದೌರ್ಬಲ್ಯ' ಎಂದು ಭಾವಿಸುತ್ತೇವೆ. 'ಏನಿದು, ಹುಡುಗಿಯರ ಥರ ಅಳ್ತೀಯಾ?' ಎಂದು ಗದರಿಸುತ್ತೇವೆ.

